

ಶ್ರೀಮತಿಯವರ 1940-50ರ ದಶಕದ ಬಹುಮುಖ್ಯ ಕೃತಿಗಳು ನ್ಯೂಯಾರ್ಕ್‌ನಲ್ಲಿ ನಡೆದ ಪ್ರದರ್ಶನದಲ್ಲಿ ಇದ್ದವು. ಇವುಗಳ ಜೊತೆ ಜೊತೆಗೆ ನ್ಯೂಯಾರ್ಕ್‌ನಲ್ಲಿ 1980ರ ದಶಕದಲ್ಲಿ ಸೃಷ್ಟಿಸಿದ ವರ್ಣಚಿತ್ರ, ವುಡ್‌ಕಟ್ ಪ್ರಿಂಟುಗಳೂ ಪ್ರದರ್ಶನದಲ್ಲಿದ್ದವು. ಈ ಎಲ್ಲಾ ಕೃತಿಗಳನ್ನು 'ಮೆಟ್ರೋ ಪಾಲಿಟನ್ ಮ್ಯೂಸಿಯಂ ಆಫ್ ಆರ್ಟ್ಸ್'ನ ಸಂಗ್ರಹವೇ ಅಲ್ಲದೆ, ಹಲವು ಖಾಸಗಿ ಸಂಗ್ರಹಗಳಿಂದಲೂ ಪಡೆದು ಪ್ರದರ್ಶಿಸಲಾಗಿತ್ತು. ಶಿವಗಂಗಾಧರ (1945), ಪರಶುರಾಮ (1946), ತಾವರೆಯೊಂದಿಗೆ ಮಹಿಳೆ (1951 ), ಸಂತ ತ್ಯಾಗರಾಜ (1952-55), ಚಾರುದತ್ತನು ವಸಂತಸೇನೆಗೆ ವಜ್ರದ ಆಭರಣ ನೀಡುತ್ತಿರುವಿಕೆ (1952), ವಿಶ್ವರೂಪ (1961), ಮಹಾಕಾಳಿ (1980) ಮತ್ತು ಏಕಲವ್ಯ ಸೇರಿದಂತೆ ಹಲವು ಕೃತಿಗಳು ವೈ.ಜಿ. ಶ್ರೀಮತಿಯವರ ಜಲವರ್ಣ ಮಾಧ್ಯಮದಲ್ಲಿನ ಪಾರಮ್ಯ ಮತ್ತು ಚಿತ್ರಿತ ರೂಪಗಳ ಕಲ್ಪನೆ ಮತ್ತು ಉತ್ಕೃಷ್ಟ ಗ್ರಹಿಕೆಗಳ ಔನ್ನತ್ಯಗಳಿಂದ ಬಹುಕಾಲ ಕಲಾರಸಿಕರ ನೆನಪಿನಲ್ಲಿ ಉಳಿಯುತ್ತವೆ.

ನಮ್ಮವರು ನೋಡಿಯೇ ಇಲ್ಲದ ಶ್ರೀಮತಿಯವರ ವಿಶಿಷ್ಟ ಕಲಾಕೃತಿಗಳನ್ನು, ಬೆಂಗಳೂರಿನ 'ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್' (NGMA) ಹಾಗೂ ರಾಷ್ಟ್ರದ ಪ್ರಮುಖ ಕಲಾಕೇಂದ್ರಗಳಲ್ಲಿ ಪ್ರದರ್ಶಿಸುವ ವ್ಯವಸ್ಥೆ ಮಾಡಬಹುದು.

●